## ಪುರಾಣ- ಚರಿತ್ರೆಯ ಕಥೆ

ಪುರಾಣ, ಐತಿಹಾಸಿಕ ಹಿಂದಿ ಧಾರಾವಾಹಿಗಳನ್ನು ಕನ್ನಡದಲ್ಲಿ ನೋಡುವ ಅವಕಾಶ ಕನ್ನಡಿಗರಿಗೆ ದೊರೆಕಿರುವುದು ಸಂತಸದ ಸಂಗತಿ. ಪುರಾಣ ಇತಿಹಾಸ ಪ್ರಸಿದ್ಧ ರಾಮಾಯಣ, ಮಹಾಭಾರತ, ಚಕ್ರವರ್ತಿ ಅಶೋಕ, ಅಂಬೇಡ್ಕರ್ ಕುರಿತ ಮಹಾನಾಯಕ... ಕನ್ನಡಿಗರ ಮನಗೆದ್ದಿವೆ.

ಇವು ಸಂಸ್ಕೃತಿ, ಇತಿಹಾಸ ಮಾಹಿತಿಯನ್ನು ನಮಗೆ ತಿಳಿಸುತ್ತವೆ. ವಿದ್ಯಾವಂತರು ಮಾತ್ರವಲ್ಲ ಅವಿದ್ಯಾವಂತರು ಸಹ ಕಿರುತೆರೆಯಲ್ಲಿ ಕಣ್ಣಾರೆ ಕಂಡು ಸವಿಯಲು ಸಾಧ್ಯವಾಯಿತು. ಆದರೆ ಚಂದ್ರಗುಪ್ತ ಮೌರ್ಯ ಕುರಿತ ಧಾರಾವಾಹಿ ಅರ್ಧಕ್ಕೆ ನಿಂತು ನಿರಾಶೆ ಉಂಟಾಗಿತ್ತು. ಐತಿಹಾಸಿಕ ಧಾರಾವಾಹಿಗಳಲ್ಲಿ ಮನರಂಜನೆಯ ಸಂಬಂಧ ಕೆಲವು ಕಾಲ್ಪನಿಕ ಸಂಗತಿ ಅಳವಡಿಸಿದ್ದರೂ ನೋಡಲು ಬೇಸರ ಉಂಟಾಗುವುದಿಲ್ಲ. ಇತ್ತೀಚೆಗೆ ಸುಭಾಷ್ ಚಂದ್ರ ಬೋಸ್ ಧಾರಾವಾಹಿ ಆರಂಭವಾಗಿದೆ. ಇಂತಹ ಧಾರಾವಾಹಿಗಳನ್ನು ನೋಡಿದರೆ ದೇಶಾಭಿಮಾನ– ಆತ್ಮಾಭಿಮಾನ ಹೆಚ್ಚಾಗುತ್ತದೆ.

—ಸಿ. ಸಿದ್ದರಾಜು ಆಲಕೆರೆ, ಮಂಡ್ಯ

## ಅಪೂರ್ವ ಸತ್ಯ

ಕಲರ್ಸ್ ಸೂಪರ್‌ನಲ್ಲಿ ಪ್ರಸಾರವಾಗುತ್ತಿರುವ 'ಪೂರ್ಣಸತ್ಯ' ಅನೇಕ ಪ್ರಶ್ನೆಗಳನ್ನು ಮನದಲ್ಲಿ ಮೂಡಿಸಿ ಚಿಂತನೆಯ ಕಡೆಗೆ ದೂಡುತ್ತದೆ. ಪ್ರೀತಿ, ಮಾನವ ಸಹಜ ದೌರ್ಬಲ್ಯ, ಸಂದರ್ಭಗಳ ಒತ್ತಡ, ಒಳ್ಳೆಯವರನ್ನೂ ಕೆಟ್ಟವರನ್ನಾಗಿ ಮಾಡುವ ದಾರುಣ ಸನ್ನಿವೇಶಗಳು, ನಂಬಿದವರ ದ್ರೋಹ, ಸಾಯುವ ಹಾಗೆ ನಾಯಕನನ್ನು ಪ್ರಚೋದಿಸುತ್ತವೆ. ಅಲ್ಲಿ ಒಬ್ಬ ಅರಿವುಳ್ಳ ವಿವೇಕ ಅವನ ಅನುಮಾನಗಳನ್ನೆಲ್ಲ, ಓರೆ ಕೋರೆಗಳನ್ನೆಲ್ಲ ತಿದ್ದುವ ಒಬ್ಬ ವ್ಯಕ್ತಿ, ಮಿತ್ರ, ಹಿತೈಷಿಯಾಗಿ ಅವನನ್ನು ಬದುಕಿಸಿ ಮರೆಯಾಗುವ ಸನ್ನಿವೇಶ ರೋಮಾಂಚನ ಉಂಟುಮಾಡುತ್ತದೆ.

ಭಾಷಣಗಳಂತೂ ಪರಿಪೂರ್ಣವಾಗಿವೆ. ಸತ್ಯದ ಅರಿವನ್ನು ಉಂಟು ಮಾಡಿದ ವ್ಯಕ್ತಿ ಅವನ ಅತ್ಮ ಸಾಕ್ಷಿಯೋ ದೇವ ನೋ... ಆಪದ್ಬಾಂಧವನೋ ಎಂಬ ಪ್ರಶ್ನೆಯನ್ನು ನಮ್ಮ ಅರಿವಿಗೇ ಬಿಡುತ್ತಾರೆ... ಯತಿರಾಜ್ ಅವರ ನಿರ್ಮಾಣ. ಪ್ರತಿಯೊಬ್ಬರೂ ನೋಡಬೇಕಾಗಿರುವ ಚಿತ್ರ.

—ಎಲ್. ಗಿರಿಜಾ ರಾಜ್

ವಾರದ ಪತ್ರ

## ನಮ್ಮ ಬಾಹುಬಲಿ



ಕೊರೊನಾ ಮಹಾಮಾರಿ ಒಂದೂವರೆ ವರ್ಷದಿಂದ ಸಮಾಜವನ್ನು ತಲ್ಲಣಗೊಳಿಸಿದೆ. ಈ ಮಹಾಮಾರಿಗಿಂತ ಹೆಚ್ಚಾಗಿ ಜನರು ಮಾನಸಿಕವಾಗಿ ಕುಗ್ಗಿ ಹೋಗಿರುವುದು ಈ ಸುದ್ದಿ ವಾಹಿನಿಗಳ ಅಬ್ಬರದಿಂದ ಎಂದರೆ ತಪ್ಪಾಗಲಾರದು. ಪ್ರಶ್ನಾರ್ಥಕ ಚಿಹ್ನೆ, ಆಶ್ಚರ್ಯ ಸೂಚಕ ಚಿಹ್ನೆಗಳನ್ನು ಹಾಕಿ 'ಬ್ರೇಕಿಂಗ್ ನ್ಯೂಸ್'ಗಳನ್ನು ಬಿತ್ತರಿಸುತ್ತ ವೀಕ್ಷಕರ ನೆಮ್ಮದಿಯನ್ನು ಹಾಳು ಮಾಡಲಾಗುತ್ತಿದೆ. ಇಂತಹ ಸಮಯದಲ್ಲಿ ಟಿವಿ 5 'ನಮ್ಮ ಬಾಹುಬಲಿ' ಎಂಬ ಕಾರ್ಯಕ್ರಮವನ್ನು ಮಾಡುತ್ತಿದೆ.

ಪ್ರಸಿದ್ಧ ವ್ಯಕ್ತಿಗಳ ಸಂದರ್ಶನ ಪ್ರಸಾರ ಮಾಡುವ ಈ ಕಾರ್ಯಕ್ರಮ ಸಂತೋಷ ತಂದಿದೆ. ಆದರೆ ಜೂನ್13 ಸೋಮವಾರ ಪ್ರಸಾರವಾದ ರಾಷ್ಟ್ರ ಪ್ರಶಸ್ತಿ ವಿಜೇತ ನಟ ಸಂಚಾರಿ ವಿಜಯ್ ಅವರ ಸಂದರ್ಶನ ನೋಡುವಾಗ ಸಂತೋಷದ ಜೊತೆ ಬೇಸರವೂ ಆಯಿತು.

ವಿನಯ, ಸಜ್ಜನಿಕೆ, ಸರಳತೆಯ ಜೊತೆಗೆ ಸಮಾಜಮುಖಿ ಕಾರ್ಯಗಳಲ್ಲಿ ತೊಡಗಿದ್ದ ಯುವಕ ಅಗಲಿದ್ದು ದುಃಖವನ್ನು ಉಂಟುಮಾಡಿತು. ಅವರ ಅಗಲಿಕೆಯ ದುಃಖದಲ್ಲಿಯೂ ಕುಟುಂಬದವರು ವಿಜಯ್ ಅವರ ಅಂಗಾಂಗಗಳನ್ನ ಸಮಾಜಕ್ಕೆ ಅರ್ಪಿಸಿ ಅವರನ್ನು ಇನ್ನೂ ಎತ್ತರಕ್ಕೆ ಏರಿಸಿದ್ದಾರೆ. ಪ್ರಸ್ತುತ ಸಂದರ್ಭದಿಂದ ಸಾಮಾನ್ಯ ಜನರಿಗೂ ಅಂಗಾಂಗ ದಾನದ ಬಗ್ಗೆ ಅರಿವು ಹೆಚ್ಚಾಗಿದೆ. ಹೆಲ್ಮೆಟ್ ಧರಿಸದೆ ತಾವು ಮಾಡಿದ ಒಂದು ತಪ್ಪಿನ ಮೂಲಕ ಅಪಾರ ಜನರಿಗೆ ಒಂದು ಪಾಠ ಹೇಳಿ ಹೋಗಿದ್ದಾರೆ. ಕೊನೆಯ ಕ್ಷಣದವರೆಗೂ ಸಮಾಜಕ್ಕಾಗಿ ಮಿಡಿದ ವಿಜಯ್ ಅವರ ಆತ್ಮಕ್ಕೆ ದೇವರು ಶಾಂತಿ ಕೊಡಲಿ.

—ವೀಣಾ ಶಂಕರ್, ಬೆಂಗಳೂರು

## ಮಂಗಳ ಗೌರಿ ಈಗ ಡಿಟೆಕ್ಟಿವ್

ಕಲರ್ಸ್ ಕನ್ನಡದಲ್ಲಿ ಮಂಗಳಗೌರಿಯ ಮದುವೆ ಇನ್ನೇನು ರಾಜೀವಪ್ಪನೊಂದಿಗೆ ಆಗಬಹುದು ಎಂದು ವೀಕ್ಷಕರು ನಿಟ್ಟುಸಿರು ಬಿಡುತ್ತಿರುವಂತೆ ಮಂಗಳ ಗೌರಿ ಡಿಟೆಕ್ಟಿವ್ ಮಂಗಳಗೌರಿ ಆಗಿದ್ದಾರೆ. ರಾಜೀವಪ್ಪ ಬದುಕಿದ್ದಾನೆಂದು ಹುಡುಕಲು ಹೊರಟಿದ್ದಾಳೆ. ಪೆಚ್ಚು ಪೆಚ್ಚಾಗಿರುವ ಮಂಗಳ ಗೌರಿ ಅಷ್ಟೇ ಪೆದ್ದಾಗಿರುವ ಇಬ್ಬರು ಪೇದೆಗಳ ಸಂಗಡ ಡಿಟೆಕ್ಟಿವ್ ಕೆಲಸ ಮಾಡುವುದನ್ನು ನೋಡಿದಾಗ ನಗು ಬರುತ್ತದೆ. ಕಥೆಗೆ ತಿರುವು ಕೊಡುವುದು ಸಹಜ. ಆದರೆ ಇದು ನೈಜವಾಗಿರಬೇಕು.

—ರಮಾನಂದ ಶರ್ಮಾ, ಬೆಂಗಳೂರು

## ಒಳಿತು- ಕೆಡಕುಗಳ ಮನಗಾಣಲಿ

ಝೀ ಕನ್ನಡದ ಸಿನಿಮಾ ಲಾಕ್‌ಡೌನ್ ಸಂದರ್ಭದಲ್ಲಿ ಮೆಚ್ಚುಗೆಯಾಗುವ ಸಿನಿಮಾ ಪ್ರಸಾರ ಮಾಡುತ್ತಿದ್ದಾರೆ. ಎಲ್ಲಾ ವಯೋಮಾನದವರಿಗೂ ಜೀವನದ ಮೌಲ್ಯವನ್ನು ತಿಳಿಸುವ ಸಿನಿಮಾ ಆಗಾಗ ಬರುತ್ತಿವೆ.

ರಾತ್ರಿ ಪ್ರಸಾರ ಮಾಡುವ ಹಳೆಯ ಸಿನಿಮಾಗಳನ್ನು ಮಧ್ಯಾಹ್ನದ ಸಮಯಕ್ಕೆ ಹಾಕಿದರೆ ಇನ್ನೂ ಚೆನ್ನಾಗಿರುತ್ತದೆ. 'ಸುಧಾ' ಜಾಣರ ಪೆಟ್ಟಿಗೆಯಲ್ಲಿ ಟೀವಿಯ ಕಾರ್ಯಕ್ರಮಗಳ ಒಳಿತು ಕೆಡುಕಿಗೆ ಸಂಬಂಧಿಸಿದ ತಮ್ಮ ಅಭಿಪ್ರಾಯವನ್ನು ವೀಕ್ಷಕರು ಮುಕ್ತವಾಗಿ ಹಂಚಿಕೊಳ್ಳಬಹುದು. ಇದನ್ನು ಟೀವಿಗಳು ಮನಗಂಡರೆ ತಮ್ಮ ತಪ್ಪುಗಳನ್ನು ತಿದ್ದಿಕೊಂಡು ಜನರ ಮೆಚ್ಚುಗೆಗೆ ಪಾತ್ರವಾಗಬಹುದು.

—ಎಂ.ಎಸ್. ಉಷಾ ಪ್ರಕಾಶ್, ಮೈಸೂರು

## ಉತ್ತಮ ಪುಸ್ತಕ ಇದ್ದರೆ...

ಚಂದನದ 'ಥಟ್ ಅಂತ ಹೇಳಿ' ಉತ್ತಮ ಕಾರ್ಯಕ್ರಮ. ನಾವೆಷ್ಟೋ ಕೇಳರಿಯದ, ಕಂಡರಿಯದ ವಿಷಯಗಳು ಇದರಿಂದ ತಿಳಿಯುತ್ತಿದೆ. ಜೊತೆಗೆ ಗುಣಮಟ್ಟದ ನಿರೂಪಣೆಯಿಂದ ಅತ್ಯುತ್ತಮ ಕಾರ್ಯಕ್ರಮವೆನಿಸಿದೆ.

ಇಷ್ಟು ಹೆಗ್ಗಳಿಕೆಗೆ ಪಾತ್ರವಾಗಿದ್ದರೂ, ಇಲ್ಲಿ ನೀಡುವ ಕೆಲ ಪುಸ್ತಕಗಳು ಅಷ್ಟೇನೂ ಗಮನ ಸೆಳೆಯುವುದಿಲ್ಲ. ಏನೋ ಕೊಡಬೇಕು ಎಂಬಂತಿರುತ್ತವೆ. ಇದಕ್ಕೆ ಕಡಿವಾಣ ಹಾಕಿ ಉತ್ತಮ ಪುಸ್ತಕಗಳನ್ನು ಕೊಡಲು ಮುಂದಾದರೆ ಈ ಕಾರ್ಯಕ್ರಮ ಮತ್ತಷ್ಟೂ ಕಳೆಗಟ್ಟುವುದರಲ್ಲಿ ಸಂದೇಹವಿಲ್ಲ.

—ಶಂಕರೇಗೌಡ ತುಂಬಕೆರೆ, ಮಂಡ್ಯ

ಇದೂ ದೋಷ: ಚಂದನದ 'ಥಟ್ ಅಂತ ಹೇಳಿ' ಪುಟ್ಟ ದೋಷ ಕಾಣಿಸುತ್ತಿದೆ. ಸ್ಪರ್ಧಿಗಳ ಎದುರಿಗಿರುವ ಪರದೆಯ ಗಾತ್ರವು ಚಿಕ್ಕದಾಗಿದ್ದು, ಸ್ಪರ್ಧಿಗಳು ವೀಕ್ಷಿಸಲು ಕಷ್ಟಪಡುತ್ತಿದ್ದಾರೆ. ಚಂದನ ವಾಹಿನಿ ಈ ಬಗ್ಗೆ ಗಮನ ಹರಿಸಲು ಕೋರಿಕೆ.

—ಎಂ.ಎಸ್. ರಾಮಚಂದ್ರ ರಾವ್, ಮೈಸೂರು

**ಧಾರಾವಾಹಿ**

ಹುಡುಗಿ  
ಅಂಕಲ್‌ನನ್ನು  
ಪ್ರೇಮಿಸಿದರೆ  
ಜೊತೆ ಜೊತೆಯಲಿ!  
ಹುಡುಗ  
ಆಂಟಿಯನ್ನು  
ಪ್ರೀತಿಸಿದರೆ  
ಶಾಂತಂ ಪಾಪಂ!

—ಪಿ.ಜೆ.ರಾಘವೇಂದ್ರ ಮೈಸೂರು